UASB
LIBRARY
Newspaper Clippings
Pg .1 Tuesday 02-03-2021 Jai Kisan



ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಸಚಿವ ಆರ್.ಶಂಕರ್ । ಒಂದು ಜಿಲ್ಲೆ ಒಂದು ಬೆಳೆ-ತಾಂತ್ರಿಕ ಕಾರ್ಯಾಗಾರ

ರೈತರ ಬೆಳೆಗೆ ಉತ್ತಮ ಮಾರುಕಟ್ಟೆ ಒದಗಿಸಲಾಗುವುದು

ವಿಶ್ವವಾಣಿ ಸುದ್ದಿಮನೆ ಕೊಪ್ಪಳ

ರೈತರು ಬೆಳೆದ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ಒದಗಿಸಲು ಒಂದು ಜಿಲ್ಲೆ ಒಂದು ಬೆಳೆ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದು ರಾಜ್ಯ ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆ ಸಚಿವ ಆರ್.ಶಂಕರ್ ಹೇಳಿದರು.

ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ಜಿಲ್ಲಾ ಕೈಗಾರಿಕೆ ಇಲಾಖೆ, ಕೊಪ್ಪಳ ಹಾಗೂ ಕೆಪೆಕ್, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕೇಂದ್ರ ಸರಕಾರದ ಆತ್ಮ ನಿರ್ಭರ್ ಯೋಜನೆಯಡಿ ಪ್ರಧಾನಮಂತ್ರಿಗಳ ಕಿರು ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆಯ ಒಂದು ಜಿಲ್ಲೆ ಒಂದು ಬೆಳೆ ಕಾರ್ಯಕ್ರಮದಡಿ ಕೊಪ್ಪಳ ಜಿಲ್ಲೆಗೆ ಆಯ್ಕೆಯಾದ ಬೆಳೆ-ಸೀಬೆ(ಪೇರಲ) ಕುರಿತು ಹಮ್ಮಿಕೊಂಡಿದ್ದ ತಾಂತ್ರಿಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.







ಒಂದು ಜಿಲ್ಲೆ ಒಂದು ಬೆಳೆ ಕಾರ್ಯಕ್ರಮದಡಿ ಕೊಪ್ಪಳ ಜಿಲ್ಲೆಗೆ ಆಯ್ಕೆಯಾದ ಬೆಳೆ-ಸೀಬೆ(ಪೇರಲ) ಕುರಿತು ಹಮ್ಮಿಕೊಂಡಿದ್ದ ತಾಂತ್ರಿಕ ಕಾರ್ಯಾಗಾರವನ್ನು ಸಚಿವ ಆರ್.ಶಂಕರ್ ಉದ್ಘಾಟಿಸಿದರು.

ತೋಟಗಾರಿಕೆ ಇಲಾಖೆಯ ವತಿಯಿಂದ ಕೊಪ್ಪಳ ಜಿಲ್ಲೆಗೆ ಒಂದು ಜಿಲ್ಲೆ ಒಂದು ಬೆಳೆ ಯೋಜನೆಯಡಿ ಪೇರಲ ಬೆಳೆ ಆಯ್ಕೆಯಾಗಿದೆ. ಜಿಲ್ಲೆಯಲ್ಲಿ ಪೇರಲ ಬೆಳೆಯುವ ಕ್ಷೇತ್ರವನ್ನು ಆಧರಿಸಿ ಬೆಳೆಯನ್ನು ನಿರ್ಧರಿಸಲಾಗಿದೆ. ಹಾಗೆಯೇ ರೈತರು ಬೆಳೆದ ಬೆಳೆಗೆ ಉತ್ತಮ ಮೌಲ್ಯ ವರ್ಧನೆಗೂ ಯೋಜನೆ ರೂಪಿಸಬೇಕು. ಹೊಸ ತಳಿ, ತಂತ್ರಜ್ಞಾನವನ್ನು ಆಳವಡಿಸಿಕೊಂಡು ಉತ್ತಮ ಇಳುವರಿ ಪಡೆಯಬೇಕು. ರೈತರು ನೇರ ಮಾರುಕಟ್ಟೆಯ ಲಾಭವನ್ನು ಪಡೆಯಬೇಕು ಎಂದರು.

ಜಿಲ್ಲೆಯ ಬಾಸಾಪುರ ಕೈಗಾರಿಕಾ ವಲಯದಲ್ಲಿ ಪೇರಲ ಬೆಳೆಯ ಸಂಸ್ಕರಣೆ ಕ್ಲಸ್ಟರ್‌ನ್ನು ಸ್ಥಾಪಿಸಲು ಜಿಲ್ಲಾಧಿಕಾರಿಗಳು ಯೋಜನೆ ರೂಪಿಸಿದ್ದು, ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಆಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಚಿವರು ರೈತರೊಂದಿಗೆ ಸಂವಾದ ನಡೆಸಿ, ಅವರ ಅಹವಾಲುಗಳನ್ನು ಆಲಿಸಿದ ಅವರು, ಸರಕಾರದಿಂದ ರೈತರಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೆಂದು ರೈತರಿಗೆ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರಾದ ಶರಣು ಭೀಮಣ್ಣ ತಳ್ಳಿಕೇರಿ, ಅಮರೇಶ ಕರಡಿ, ನಾಥ ನಾರಾಯಣಪುರ, ಶಿವಕುಮಾರ, ಕೆಪೆಕ್ ಸಂಸ್ಥೆಯ ಉಪ ನಿರ್ದೇಶಕರಾದ ವೆಂಕಟೇಶ ಕೃಷ್ಣ, ಧಾರವಾಡ ಹಾಗೂ ರಾಯಚೂರು ಕೃಷಿ ವಿಶ್ವ ವಿದ್ಯಾಲಯಗಳ ಕೃಷಿ ವಿಜ್ಞಾನಿಗಳು, ತಜ್ಞರು, ವಿವಿಧ ಇಲಾಖೆಗಳ ಅಧಿಕಾರಿಗಳು ಸೇರಿದಂತೆ ಜಿಲ್ಲೆಯ ರೈತರು ಉಪಸ್ಥಿತರಿದ್ದರು.

> ರೈತರ ಅನುಕೂಲಕ್ಕಾಗಿ ಸರಕಾರದಿಂದ ಸಿಗುವ ಸಬ್ಸಿಡಿ, ಸೌಲಭ್ಯಗಳನ್ನು ಜಿಲ್ಲಾಡಳಿತದ ಸಹಕಾರದೊಂದಿಗೆ ಪಡೆಯಬಹುದು. ಬ್ಯಾಂಕ್‌ನಿಂದ ಸಹಾಯಧನ ಪಡೆಯಲು ತೊಂದರೆ ಉಂಟಾದಲ್ಲಿ ಅಥವಾ ಬ್ಯಾಂಕ್ ಅಧಿಕಾರಿಗಳಿಂದ ಸಮಸ್ಯೆಯಾದಲ್ಲಿ ಜಿಲ್ಲಾಡಳಿತವನ್ನು ಸಂಪರ್ಕಿಸಿದಲ್ಲಿ ಅಗತ್ಯ ಸಹಾಯ ಮಾಡಲಾಗುವುದು. ರೈತರು ಸರಕಾರ ನೀಡುವ ಸಹಾಯಧನ, ಸಬ್ಸಿಡಿಗಳನ್ನು ಆವಲಂಬಿಸಿ ಕೃಷಿ ಮಾಡುವ ಬದಲು ಸ್ವಪ್ರತಿಷ್ಠಾಸಕ್ತಿಯಿಂದ ಕೃಷಿಗೆ ಮುಂದಾಗಬೇಕು. ನಮ್ಮ ಆಸಕ್ತಿಯೇ ಅರ್ಧ ಯಶಸ್ಸನ್ನು ತಂದುಕೊಡುತ್ತದೆ. ಉಳಿದಂತೆ ಸೂಕ್ತ ಕ್ರಮಗಳನ್ನು ಅನುಸರಿಸಿ ಬೆಳೆ ಬೆಳೆಯುವುದು ಮಾತ್ರವಲ್ಲದೆ, ಬೆಳೆಯನ್ನು ಸಂಸ್ಕರಿಸುವ, ಉತ್ತಮ ಮಾರುಕಟ್ಟೆ ಒದಗಿಸುವ ತಂತ್ರವೂ ತಿಳಿದಿರಬೇಕು.
>
> – ವಿಕಾಸ್ ಕಿಶೋರ್ ಸುರಳ್ಕರ್ ಜಿಲ್ಲಾಧಿಕಾರಿ

02-03-2021 Vsv Pg 11

ಕೃಷಿಕರಿಗಾಗಿ ಕೇಂದ್ರ ಕೆಲಸ

ದೆಹಲಿ : ರೈತರು ಮೂರು ಕೃಷಿ ಕಾನೂನುಗಳ ವಿರುದ್ಧ ಪ್ರತಿಭಟನೆ ಮುಂದುವರಿಸುತ್ತಿದ್ದಂತೆ, 2021-22ನೇ ಸಾಲಿನ ಬಜೆಟ್ ನಲ್ಲಿ ಕೃಷಿ ವಲಯಕ್ಕೆ ತೆಗೆದುಕೊಳ್ಳಲಾದ ನಿಬಂಧನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಅನುಮೋದಿಸಿದ್ದಾರೆ.



ಕೇಂದ್ರ ಬಜೆಟ್ ನಲ್ಲಿ ಕೃಷಿ ವಲಯಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾತನಾಡಿ, ಸರಕಾರ ಕೃಷಿ ಸಾಲ ನೀಡುವ ಗುರಿಯನ್ನು 16.50 ಲಕ್ಷ ಕೋಟಿ ರೂ.ಗೆ, ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗಿದೆ. ಗ್ರಾಮೀಣ ಮೂಲಸೌಕರ್ಯ ನಿಧಿ ಯನ್ನು 40 ಸಾವಿರ ಕೋಟಿ ರೂ.ಗೆ ಹೆಚ್ಚಿಸಲಾಗಿದೆ. ಸೂಕ್ಷ್ಮ ನೀರಾವರಿ ನಿಧಿ ದ್ವಿಗುಣಗೊಂಡಿದೆ ಎಂದಿದ್ದಾರೆ.

ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗಾಗಿ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಪುನರುಚ್ಚರಿಸಿದರು. ಸಣ್ಣ ಮತ್ತು ಮಧ್ಯಮ ಮಟ್ಟದ ರೈತರಿಲ್ಲದೆ ಭಾರತ ಬೆಳೆಯಲು ಸಾಧ್ಯವಿಲ್ಲ. (ಸಣ್ಣ ಮತ್ತು ಮಧ್ಯಮ ಮಟ್ಟದ ರೈತರು) ಇಲ್ಲದೇ ದೇಶ ಬೆಳೆಯುವುದಿಲ್ಲ. ಇನ್ನೂ 1,000 ಮಂಡಿಯನ್ನು ಇ- ನಾಮ್‌ಗೆ ಸಂಪರ್ಕಿಸಲು ಯೋಜನೆ ಇದೆ ಎಂದರು.

ಕ್ರಾಂತಿ ಮೊದಲೇ ಆಗಬೇಕಿತ್ತು: ಆಹಾರ ಸಂಸ್ಕರಣಾ ಕ್ರಾಂತಿಯನ್ನು 2-3 ದಶಕಗಳ ಹಿಂದೆಯೇ ಮಾಡಬೇಕಿತ್ತು ಎಂದು ಹೇಳಿದರು. 21ನೇ ಶತಮಾನದ ಭಾರತದಲ್ಲಿ ಕೃಷಿ ಉತ್ಪಾದನೆ ಹೆಚ್ಚುತ್ತಿರುವ ನಡುವೆಯೇ ಸುಗ್ಗಿಯ ನಂತರದ ಅಥವಾ ಆಹಾರ ಸಂಸ್ಕರಣೆ ಕ್ರಾಂತಿ ಮತ್ತು ಮೌಲ್ಯ ವರ್ಧನೆಯ ಅಗತ್ಯವಿದೆ. 2-3 ದಶಕಗಳ ಹಿಂದೆ ಈ ರೀತಿ ಮಾಡಿದ್ದರೆ ದೇಶಕ್ಕೆ ಒಳ್ಳೆಯದಾಗುತ್ತಿತ್ತು ಎಂದಿದ್ದಾರೆ.

02-03-2021 Vsv Pg 12

For more information visit
University Library Website
Web - uasbagrilibindia.org
E-mail- librarian@uasbangalore.edu.in

"Slow progress is still progress"

UASB LIBRARY
Newspaper Clippings
Pg .2 Tuesday 02-03-2021 Jai Kisan



ಮಾರ್ಚ್-ಏಪ್ರಿಲ್‌ನಲ್ಲಿ ಇನ್ನೊಂದು ಹದ ಮಳೆ ಬಿದ್ದರೆ ಕನಸು ನನಸು


ಕಾಫಿ ಗಿಡದಲ್ಲಿ ಹೂವೆಂಬ ಬೆಳದಿಂಗಳು

■ ತೇಲಪಂಡ ಕವನ್ ಕಾರ್ಯಪ್ಪ
ಸೋಮವಾರಪೇಟೆ
kavancariappacoorg@gmail.com

ಕಳೆದ ತಿಂಗಳು ಸುರಿದ ಅಕಾಲಿಕ ಮಳೆಯಿಂದ ಕಾಫಿ ಬೆಳೆಗಾರರಿಗೆ ವರದಾನವಾಗಿದೆ. ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಈ ಮಳೆಯಿಂದಾಗಿ ಅರೆಬಿಕಾ ಕಾಫಿ ಸೊಗಸಾಗಿ ಹೂವು ಬಿಟ್ಟಿದ್ದು, ಬೆಳೆಗಾರರ ನಗೆ ಅರಳಿದೆ.

ಎಲ್ಲಿ ನೋಡಿದರೂ ಮಲ್ಲಿಗೆ ಚೆಲ್ಲಿದಂತೆ ಕಾಫಿ ತೋಟಗಳು ಕಂಗೊಳಿಸುತ್ತಿವೆ. ಘಮ ಘಮ ಸುವಾಸನೆ, ಜೇನ್ನೊಣ, ದುಂಬಿಗಳ ಝೇಂಕಾರ ಎಲ್ಲರನ್ನೂ ಮೋಡಿ ಮಾಡಿದೆ. ಅಕಾಲಿಕ ಮಳೆಯಿಂದ ಕಾಫಿ ಕೊಯ್ಲು ಮತ್ತು ಕೊಯ್ಲು ಮಾಡಿದ ಕಾಫಿ ಒಣಗಿಸಲು ತೊಂದರೆಯಾದರೂ ಈಗ ಅರಳಿರುವ ಹೂವು ಬೆಳೆಗಾರರಲ್ಲಿ ಹೊಸ ಭರವಸೆ ಮೂಡಿಸಿದೆ.

ಪ್ರತಿ ವರ್ಷ ಅಕಾಲಿಕ ಮಳೆಯಿಂದ ಫಸಲು ನಷ್ಟ ಅನುಭವಿಸುತ್ತಿದ್ದ ಬೆಳೆಗಾರರು, ಪ್ರಸಕ್ತ ವರ್ಷ ಉತ್ತಮ ಹೂ ಬಿಟ್ಟಿರುವುದರಿಂದ ಬಂಪರ್ ಫಸಲಿನ ನಿರೀಕ್ಷೆಯಲ್ಲಿದ್ದಾರೆ. ಹೂವು ಅರಳಿದ ನಂತರದ ಎರಡು ವಾರದಲ್ಲಿ ಬ್ಯಾಕಿಂಗ್ ಮಳೆ ಅವಶ್ಯಕತೆಯಿದ್ದು, ಒಂದು ಇಂಚಿನಷ್ಟು ಮಳೆ ಸುರಿದರೆ, ಬೆಳೆಗಾರರು ಹೆಚ್ಚಿನ ಫಸಲು ನಿರೀಕ್ಷೆ ಮಾಡಬಹುದು. ಆದರೆ ಈ ತಿಂಗಳು ಮಳೆ ಬರದೆ ಹೋದರೆ ಬೆಳೆಗಾರನ ಉತ್ಸಾಹಕ್ಕೆ ತಣ್ಣೀರು ಎರಚಿದಂತಾಗುತ್ತದೆ.



ಜಿಲ್ಲೆಯ ಹಲವು ಕಡೆಗಳಲ್ಲಿ ಅರೇಬಿಕಾ ಕಾಫಿ ತೋಟಗಳಲ್ಲಿ ಹೂವು ಅರಳಿ ನಗುತ್ತಿದೆ.

ಆರೋಗ್ಯವಂತ ಗಿಡಗಳಲ್ಲಿ ಮಾತ್ರ ಅಕಾಲಿಕ ಮಳೆಗೆ ಹೂ ಅರಳುತ್ತದೆ. ಮುಂದೆ ಬೆಳೆಗಾರರಿಗೆ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗುವುದು ಅನುಮಾನ. ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಮಳೆಯ ಅವಶ್ಯಕತೆ ಇದೆ.

-ಬಾಚಿನಾಡಂಡ ಮೋಹನ್ ಬೋಪಣ್ಣ ಅಧ್ಯಕ್ಷರು, ಕಾಫಿ ಬೆಳೆಗಾರರ ಸಂಘ, ಸೋಮವಾರಪೇಟೆ

ಉತ್ತಮ ಹೂ ಮಳೆಯಾದ ನಂತರ ಕಾಫಿ ತೋಟದ ನಿರ್ವಹಣೆಗೆ ಬೆಳೆಗಾರರು ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ. ಕಾರ್ಮಿಕರ ಕೊರತೆಯ ಹಿನ್ನೆಲೆ ದುಪ್ಪಟ್ಟು ಕೂಲಿ ಕೊಟ್ಟು ಕೆಲಸ ಮಾಡಿಸಬೇಕಾದ ಅನಿವಾರ್ಯತೆ ಒದಗಿದೆ. ಜಿಲ್ಲೆಯಲ್ಲಿ 1,02,525 ಹೆಕ್ಟೇರ್ ಪ್ರದೇಶದಲ್ಲಿ ಕಾಫಿ ಬೆಳೆಯಲಾಗುತ್ತಿದ್ದು, 74,495 ಹೆಕ್ಟೇರ್‌ನಲ್ಲಿ ರೋಬಸ್ಟಾ 28,030 ಹೆಕ್ಟೇರ್‌ನಲ್ಲಿ ಅರೇಬಿಕಾ ಕಾಫಿ ಬೆಳೆಯಲಾಗುತ್ತಿದೆ. ಸೋಮವಾರಪೇಟೆ ತಾಲೂಕಿನಲ್ಲಿ ಒಟ್ಟು 28,540 ಹೆಕ್ಟೇರ್‌ನಲ್ಲಿ ಕಾಫಿ ಬೆಳೆಯಲಾಗುತ್ತಿದೆ. ತಾಲೂಕಿನ ಬಹು ಭಾಗದಲ್ಲಿ ಅರೇಬಿಕಾ ಕಾಫಿ ಬೆಳೆಯಲು ಸೂಕ್ತ ಪ್ರದೇಶವಾಗಿರುವುದರಿಂದ 22,940 ಹೆಕ್ಟೇರ್‌ನಲ್ಲಿ ಅರೇಬಿಕಾ, 5,600 ಹೆಕ್ಟೇರ್‌ನಲ್ಲಿ ರೋಬಸ್ಟಾ ಬೆಳೆಯಲಾಗುತ್ತಿದೆ.

ಅತಿ ಹೆಚ್ಚು ಅರೇಬಿಕಾ ಕಾಫಿ ಬೆಳೆಯುವ ಶನಿವಾರಸಂತೆ, ಸೋಮವಾರಪೇಟೆ ಕಸಬಾ, ಶಾಂತಳ್ಳಿ, ಕೊಡ್ಲಿಪೇಟೆ ಹೋಬಳಿಯಲ್ಲಿ ಸರಾಸರಿ ಒಂದೂ ವರೆಯಿಂದ, ಎರಡು ಇಂಚಿನವರಗೆ ಹೂಮಳೆ ಸುರಿದಿದೆ. ಮುಂದಿನ ದಿನಗಳಲ್ಲಿ ಮಳೆ ಕೈ ಕೊಟ್ಟರೆ ಬೆಳೆಗಾರರು ಸ್ಪ್ರಿಂಕ್ಲರ್ ಮೂಲಕ ನೀರು ಹಾಯಿಸಬೇಕಾಗುತ್ತದೆ.

02-03-2021 Vk Pg 11